# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1099
ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 21.08.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯನಗರ ಜಿಲ್ಲೆಯ ತುಂಗಭದ್ರಾ ಜಲಾಶಯದ ಕ್ರೆಸ್ಟ್‌ಗೇಟ್‌ಗಳು ದುರ್ಬಲವಾಗಿದ್ದು ಇವುಗಳನ್ನು ಬದಲಾಯಿಸುವ ಬಗ್ಗೆ ತಜ್ಞರು ನೀಡಿರುವ ಅಭಿಪ್ರಾಯಗಳೇನು; (ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು) | ತುಂಗಭದ್ರಾ ಅಣೆಕಟ್ಟು ಗೇಟುಗಳ ಸುರಕ್ಷತೆಗೆ ಸಂಬಂಧಿಸಿದಂತೆ ತುಂಗಭದ್ರಾ ಮಂಡಳಿಯು ಶ್ರೀ ಎ.ಕೆ.ಬಜಾಜ್, ನಿವೃತ್ತ ಅಧ್ಯಕ್ಷರು, ಕೇಂದ್ರ ಜಲ ಆಯೋಗ ಇವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ವಿಚಾರಣಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ:08.09.2024 ಮತ್ತು 09.09.2024 ರಂದು ತುಂಗಭದ್ರಾ ಅಣೆಕಟ್ಟನ್ನು ಪರಿಶೀಲಿಸಿ, ನೀಡಿರುವ ವರದಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಆ) | ಈ ದುರ್ಬಲ ಕ್ರೆಸ್ಟ್ ಗೇಟ್‌ಗಳನ್ನು ಬದಲಾಯಿಸುವ ಟೆಂಡರ್ ಕಾಮಗಾರಿಗಳು ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ನಡೆಸಲಾಗುವುದು; ಇದಕ್ಕೆ ಇಲಾಖೆ ತೆಗೆದುಕೊಂಡ ಕ್ರಮಗಳೇನು; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು. | ತುಂಗಭದ್ರಾ ಯೋಜನೆಯು ಅಂತರ ರಾಜ್ಯ (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ) ಯೋಜನೆಯಾಗಿದ್ದು, ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿ(TB Board)ಯ ವ್ಯಾಪ್ತಿಯಲ್ಲಿರುತ್ತದೆ.<br><br>ತುಂಗಭದ್ರಾ ಜಲಾಶಯದ ಗೇಟುಗಳನ್ನು ಬದಲಾಯಿಸುವ ಸಂಬಂಧದಲ್ಲಿ ತುಂಗಭದ್ರಾ ಮಂಡಳಿಯು ಈ ಕೆಳಕಂಡಂತೆ ಕ್ರಮ ವಹಿಸಿರುತ್ತದೆ:<br><br>1. ಕಳೆದ ವರ್ಷ ಕೊಚ್ಚಿಹೋದ ಗೇಟ್ ನಂ.19ಕ್ಕೆ ಹೊಸ ಗೇಟನ್ನು ಅಳವಡಿಸುವಿಕೆ ಕಾಮಗಾರಿಯ ಟೆಂಡರ್ ವಹಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ early monsoon ಮತ್ತು ಜೂನ್ ಮಾಹೆಯಲ್ಲಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಒಳಹರಿವು ಬಂದ ಕಾರಣ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಜಲಾಶಯದಲ್ಲಿ ನೀರಿನ ಮಟ್ಟ 1613 ಅಡಿಗೆ ಇಳಿದ ನಂತರ ಕೈಗೆತ್ತಿಕೊಳ್ಳಲಾಗುವುದು.<br><br>2. ಅಣೆಕಟ್ಟೆಯ ಬಾಕಿ 32 ಗೇಟುಗಳನ್ನು ಬದಲಾಯಿಸುವ ಕಾಮಗಾರಿಯನ್ನು ಜೂನ್-2025ರಲ್ಲಿ ಗುತ್ತಿಗೆ ವಹಿಸಲಾಗಿದ್ದು, 15 ತಿಂಗಳ ಕಾಲಾವಧಿ ನೀಡಲಾಗಿದೆ.<br><br>3. ದಿನಾಂಕ:03.06.2025ರಂದು ತುಂಗಭದ್ರಾ ಮಂಡಳಿಯ 223ನೇ ಸಭೆಯಲ್ಲಿ ಗೇಟುಗಳ ಬದಲಾವಣೆಯನ್ನು ಕಾರ್ಯವನ್ನು ಆದ್ಯತೆ ಮೇರೆಗೆ ಜೂನ್-2026ರೊಳಗಾಗಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.<br><br>ತುಂಗಭದ್ರಾ ಅಣೆಕಟ್ಟೆಯ 19ನೇ ಸಂಖ್ಯೆಯ ಗೇಟ್ ಕೊಚ್ಚಿಹೋದ ಘಟನೆಯ ನಂತರ ಅಣೆಕಟ್ಟೆಯ ಸುರಕ್ಷತೆ, ಬಾಕಿ 32 ಗೇಟುಗಳ ಸ್ಥಿತಿಗತಿ, ಗೇಟುಗಳ ಬದಲಾವಣೆ ಕುರಿತು ತುಂಗಭದ್ರಾ ಮಂಡಳಿಯೊಂದಿಗೆ ರಾಜ್ಯ ಸರ್ಕಾರವು ನಿರಂತರವಾಗಿ ಅನುಸರಣೆ ಮಾಡುತ್ತಿದೆ. |
| ಇ) | ಕಳೆದ ವರ್ಷ ಗೇಟ್ ನಂ.19ರಲ್ಲಿ ಆದ ಅವಘಡದಂತೆ ಮತ್ತೆ ಯಾವುದೇ ಅಪಘಾತಗಳನ್ನು ನಡೆಯದಂತೆ ಡ್ಯಾಂ ಮತ್ತು ಕ್ರಸ್ಟ್ ಗೇಟ್‌ಗಳ ಬಗ್ಗೆ ಯಾವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | |

ಸಂಖ್ಯೆ:ಜಸಂಇ 117 ಎಂಎಲ್‌ಎ 2025

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ